**<u>ಕ್ರಿಮಿನಲ್ .ಮಿಸ್ ಸಂಖ್ಯೆ: - 212/2019</u>** **ಪಿ.ಡಬ್ಲ್ಯೂ:-1**

ದಿನಾಂಕಃ **06-07-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಎದುರುದಾರರ ಪರ ವಕೀಲರಿಂದ :-</u>

ನನ್ನ ಮತ್ತು ಎದುರುದಾರರ ಮದುವೆಯ ಸಮಯದಲ್ಲಿ ಎದುರುದಾರರಿಗೆ ರೂ.2,00,000/- ಮತ್ತು 10 ತೊಲ ಬಂಗಾರ ಮತ್ತು 500 ಗ್ರಾಂ ಬೆಳ್ಳಿ ಕೊಟ್ಟಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಕುಟುಂಬದವರು ಎದುರುದಾರನಿಗೆ ಟ್ರ್ಯಾಕ್ಟರ್ ಚಾಲಕ ಕೆಲಸವನ್ನು ಮಾಡಬೇಡ ಮತ್ತು ಜಮೀನಿನ ಎಲ್ಲಾ ವ್ಯವಹಾರಗಳನ್ನು ನಮಗೆ ವಹಿಸಿಕೊಡು ಎಂದು ಹಿಂಸೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಮದುವೆಯಾದ ದಿನದಿಂದಲೂ ಎದುರುದಾರರ ಜೊತೆ ಸಂಸಾರವನ್ನು ಮಾಡದೇ ನನ್ನ ತಾಯಿಯ ಮನೆಯಲ್ಲೇ ವಾಸಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಯರಿಗೆ ಎದುರುದಾರನ ಬಗ್ಗೆ ಇಲ್ಲ ಸಲ್ಲದ ಚಾಡಿ ಹೇಳುತ್ತಿದ್ದರಿಂದ ಯಾವಗಲೂ ಗಲಾಟೆ ನಡೆಯುತ್ತಿತ್ತು ಎಂದರೆ ಸರಿಯಲ್ಲ. ನನ್ನ ಮತ್ತು ಎದುರುದಾರನ ದಾಂಪತ್ಯ ಜೀವನವನ್ನು ಸರಿ ಮಾಡಲು ಸಾಕಷ್ಟು ಪಂಚಾಯಿತಿ ನಡೆದರೂ ಸಹ ನಾನು ಸರಿ ಮಾಡಿಕೊಳ್ಳದೇ ಎದುರುದಾರನ ಬಗ್ಗೆ ವಿನಾಕಾರಣ ಜಗಳ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನು ನಾನು ನಾಪತ್ತೆಯಾಗಿದ್ದೇನೆ ಎಂದು 2012 ನೇ ಸಾಲಿನಲ್ಲಿ ಪೊಲೀಸರಿಗೆ ದೂರನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎದುರುದಾರನು ನನಗೆ ಕೈ ಮುರಿಯುವ ಹಾಗೆ ಹೊಡೆದಿದ್ದರಿಂದ ನಾನು ಬಿಳಚೋಡು ಗ್ರಾಮಕ್ಕೆ ಹೋಗಿದ್ದು, ಅಲ್ಲಿಂದ ನನ್ನ ತಂದೆ ತಾಯಿಯವರು ಕರೆದುಕೊಂಡು ಹೋಗಿದ್ದರು. ಎದುರುದಾರರು ನನ್ನ ತವರು ಮನೆಗೆ ಬಂದು ನನ್ನನ್ನು ಕರೆಯುತ್ತಿದ್ದ ಸಂದರ್ಭದಲ್ಲಿ ನನ್ನ ಸಹೋದರರು ಎದುರುದಾರನಿಗೆ ಹಲ್ಲೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ನನ್ನ 2 ನೇ ಮಗನ ಹೆರಿಗೆಗೆಂದು ನನ್ನ ತವರು ಮನೆಗೆ ಹೋದ ನಂತರ ವಾಪಾಸ್ಸು ನನ್ನ ಗಂಡನ ಮನೆಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಊರಿನಲ್ಲಿ ಪಂಚಾಯಿತಿ ನಡೆದ ನಂತರ ನಾನು ಎದುರುದಾರನ ಮನೆಗೆ ಹೋಗಿ ಆ ಸಮಯದಲ್ಲಿ ಎದುರುದಾರನ ಮನೆಯಲ್ಲಿ ಕೆಲಸವನ್ನು ಮಾಡದೇ ಮತ್ತು ಸಂಸಾರವನ್ನು ಮಾಡದೇ ವಿನಾಕಾರಣ ಎದುರುದಾರನಿಗೆ

ತೊಂದರೆಯನ್ನು ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಗಂಡನ ಮನೆಯಿಂದ ವಾಪಾಸ್ಸು ನನ್ನ ತವರು ಮನೆಗೆ ಹೋಗಿದ್ದರಿಂದ ಎದುರುದಾರರು ಹರಿಹರ ನ್ಯಾಯಾಲಯದಲ್ಲಿ ಎಂ.ಸಿ 17/2015 ರ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಎಂ.ಸಿ 17/2015 ರಲ್ಲಿ ರಾಜಿಯಾದ ನಂತರ ನಾನು ಎದುರುದಾರರ ಜೊತೆ ಸಂಸಾರವನ್ನು ಮಾಡಲು ವಾಪಾಸ್ಸು ಎದುರುದಾರರ ಮನೆಯಲ್ಲಿ ವಾಸವಾಗಿದ್ದೀನಿ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು, ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.